# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)
ಮಂಗಳವಾರ, 04ನೇ ಜುಲೈ, 2020

ಸಂಖ್ಯೆ:65

ಶಾಸಕರ ಭವನದ ಕಟ್ಟಡಗಳಲ್ಲಿನ ಪಾರ್ಕಿಂಗ್‌ನಲ್ಲಿ ಮಾನ್ಯ ಸದಸ್ಯರುಗಳ ಮತ್ತು ಶಾಸಕರ ಭವನದ ವಾಹನಗಳಿಗೆ ಮಾತ್ರ ನಿಲುಗಡೆ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಆದರೆ ಸದರಿ ಸ್ಥಳಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಮಾನ್ಯ ಸದಸ್ಯರುಗಳ ಆಪ್ತ ಸಿಬ್ಬಂದಿಯ ವಾಹನಗಳನ್ನು ನಿಲುಗಡೆ ಮಾಡಲಾಗಿದ್ದು, ಸದರಿ ವಾಹನಗಳನ್ನು ಸುಮಾರು ತಿಂಗಳುಗಳು ಕಳೆದರೂ ತೆರವುಗೊಳಿಸದೆ ಇರುವುದು ಕಂಡು ಬಂದಿರುತ್ತದೆ. ಇದರಿಂದ ಮಾನ್ಯ ಸದಸ್ಯರುಗಳ ವಾಹನಗಳನ್ನು ನಿಲುಗಡೆ ಮಾಡಲು ತೊಂದರೆಯಾಗಿರುತ್ತದೆಯೆಂದು ಮಾನ್ಯ ಸದಸ್ಯರುಗಳಿಂದ ಹಲವಾರು ದೂರುಗಳು ಬಂದಿರುತ್ತವೆ. ಶಾಸಕರ ಭವನದ ಆವರಣದಲ್ಲಿ ಹಾಗೂ ಕಟ್ಟಡಗಳ ವಾಹನ ನಿಲುಗಡೆ ಸ್ಥಳಗಳಲ್ಲಿ ಮಾನ್ಯ ಸದಸ್ಯರುಗಳ ವಾಹನಗಳನ್ನು ಮಾತ್ರ ನಿಲುಗಡೆ ಮಾಡಲು ವ್ಯವಸ್ಥೆ ಇರುತ್ತದೆ. ಮಾನ್ಯ ಸದಸ್ಯರು ಅವರಿಗೆ ಮೀಸಲಾಗಿದ್ದ ಸೌಲಭ್ಯವನ್ನು ಬಳಸಿಕೊಳ್ಳಬೇಕೆಂದು ಹಾಗೂ ಸದಸ್ಯರ ಆಪ್ತ ಸಹಾಯಕರು/ಅತಿಥಿಗಳು ಶಾಸಕರ ಭವನದ ವಾಹನ ನಿಲುಗಡೆ ಸ್ಥಳದಲ್ಲಿ ವಾಹನ ಪಾರ್ಕಿಂಗ್ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಆದುದರಿಂದ, ಶಾಸಕರ ಭವನದ ವಾಹನ ನಿಲುಗಡೆ ಪ್ರದೇಶಗಳಲ್ಲಿ ತೀವ್ರ ಸ್ಥಳಾವಕಾಶದ ಅಭಾವವಿರುವುದರಿಂದ, ಶಾಸಕರ ಭವನದ ವಾಹನಗಳು ಮತ್ತು ಮಾನ್ಯ ಸದಸ್ಯರ ವಾಹನಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ವಾಹನಗಳನ್ನು ದಿ:15ನೇ ಜುಲೈ 2020 ರೊಳಗಾಗಿ ತೆರವುಗೊಳಿಸಬೇಕೆಂದು, ತಪ್ಪಿದ್ದಲ್ಲಿ, ಸಂಚಾರ ಭದ್ರತಾ ಪೋಲೀಸ್ ಸಿಬ್ಬಂದಿಯಿಂದಲೇ ಅನಧಿಕೃತ ವಾಹನಗಳೆಂದು ಪರಿಗಣಿಸಿ ತೆರವುಗೊಳಿಸಲಾಗುವುದು.

ಅದೇ ರೀತಿ ಕೊರೋನಾ ವೈರಸ್ (ಕೋವಿಡ್-19) ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಶಾಸಕರ ಭವನಕ್ಕೆ ಆಗಮಿಸುವವರ ಕುರಿತು ಕಡ್ಡಾಯವಾಗಿ ಅವರ ಹೆಸರು, ಮೊಬೈಲ್ ಸಂಖ್ಯೆ, ಯಾರನ್ನು ಭೇಟಿ ಮಾಡುತ್ತಿರುವುದು, ಭೇಟಿಯ ಉದ್ದೇಶ ಹಾಗೂ ಯಾವ ಸ್ಥಳದಿಂದ ಬಂದಿರುತ್ತಾರೆಂದು ವಿವರಗಳನ್ನು ಮುಖ್ಯ ದ್ವಾರಗಳಲ್ಲಿ ಕಟ್ಟುನಿಟ್ಟಾಗಿ ದಾಖಲಿಸಲು ಸೂಚಿಸಲಾಗಿರುತ್ತದೆ. ಶಾಸಕರ ಭವನ ಪ್ರವೇಶಿಸುವವರು ಮಾನ್ಯ ಶಾಸಕರೊನ್ನೊಳಗೊಂಡಂತೆ ಆಪ್ತ ಸಹಾಯಕ, ವಾಹನ ಚಾಲಕ, ಅಂಗರಕ್ಷಕರು (ಇದ್ದಲ್ಲಿ) ಸೇರಿ ಒಟ್ಟು ನಾಲ್ಕು ಮಂದಿಗೆ ಸೀಮಿತಗೊಂಡು ಪ್ರವೇಶವನ್ನು ನಿಗಧಿಗೊಳಿಸಿದೆ.

ಶಾಸಕರ ಭವನ ಪ್ರವೇಶಿಸುವವರ ಪ್ರತಿಯೊಬ್ಬರಿಗೂ ಪ್ರಾಥಮಿಕ ವೈದ್ಯಕೀಯ ತಪಾಸಣೆ ಕಡ್ಡಾಯಗೊಳಿಸಲಾಗಿದ್ದು, ತಾವು ತಮ್ಮ ವಾಹನವನ್ನು ನಿಲ್ಲಿಸಿ, ತಪಾಸಣೆಗೆ ಒಳಗಾಗುವ ಮೂಲಕ ಸಹಕರಿಸಬೇಕೆಂದು ಈ ಮೂಲಕ ವಿನಂತಿಸಲಾಗಿದೆ.

ಕೆ.ಆರ್.ಮಹಾಲಕ್ಷ್ಮಿ
ಕಾರ್ಯದರ್ಶಿ

ಗೆ:

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ